# ಕರ್ನಾಟಕ ಆಯವ್ಯಯ 2007-08

## ಮುಖ್ಯಾಂಶಗಳು

**ಸಾಮಾನ್ಯ:**

- ಮೈತ್ರಿಕೂಟ ಸರ್ಕಾರದ ಎರಡನೆಯ ಮುಂಗಡ ಪತ್ರ.
- ಸರ್ಕಾರದ ಆದ್ಯತೆಗಳು ಸ್ಪಷ್ಟವಾಗಿವೆ.
- ಅಭಿವೃದ್ಧಿಯ ವೇಗೋತ್ಕರ್ಷ
- ಸಮತೋಲನದ ಅಭಿವೃದ್ಧಿ
- ಸಾಮಾಜಿಕ ನ್ಯಾಯ
- ಸಾಮಾಜಿಕ ಸಾಮರಸ್ಯ
- ಸಾಮಾಜಿಕ ಭದ್ರತೆ
- ಆಹಾರ ಭದ್ರತೆ
- ಮಾನವ ಸಂಪನ್ಮೂಲದ ಸದ್ಬಳಕೆಗೆ ಕೌಶಲ್ಯಾಭಿವೃದ್ಧಿ
- ಉದ್ಯೋಗಾವಕಾಶಗಳಲ್ಲಿ ಹೆಚ್ಚಳ
- ನಾಡಿನ ನೆಲ-ಜಲ, ಭಾಷೆ ಮತ್ತು ಸಂಸ್ಕೃತಿಗಳ ಸಂರಕ್ಷಣೆ.

**ಆರ್ಥಿಕ ಪರಿಸ್ಥಿತಿ:**

- 2006-07ನೇ ಸಾಲಿನಲ್ಲಿ ಸಾಮಾನ್ಯ ಬೆಳವಣಿಗೆ.
- ರಾಜ್ಯದ ಸ್ಥೂಲ ಆರ್ಥಿಕ ಮೂಲ ಅಂಶಗಳು ದಷ್ಟಪುಷ್ಟ.
- ಒಟ್ಟು ಆಂತರಿಕ ಉತ್ಪನ್ನ (ಜಿಎಸ್‌ಡಿಪಿ) 1,94,009 ಕೋಟಿ ರೂ.
- ವಾಸ್ತವಿಕ ಬೆಳವಣಿಗೆ ಶೇಕಡಾ 8.
- ರಾಜ್ಯದ ಒಟ್ಟಾರೆ ಸಾಲದ ಮೊತ್ತ 53912.68 ಕೋಟಿ ರೂ.

- ಸಾಲವೃದ್ಧಿ ದರ ಶೇ.10.14.
- ಇಕ್ರಾ (ICRA) ಸಂಸ್ಥೆಯ ಶ್ರೇಣಿ ನೀಡಿಕೆ - LA+
- (ರಾಷ್ಟ್ರದಲ್ಲೇ ಅತ್ಯುತ್ತಮ ಶ್ರೇಣಿ ಪಡೆದಿರುವ ರಾಜ್ಯ- ಕರ್ನಾಟಕ).
- ಕ್ರಿಸಿಲ್ (CRISIL) ಸಂಸ್ಥೆಯ ಶ್ರೇಣಿ ನೀಡಿಕೆ- AA-

**ಜಿಎಸ್‌ಡಿಪಿಗೆ ಕೊಡುಗೆ**

- ಪ್ರಾಥಮಿಕ ವಲಯ ಶೇ.19.2
- ದ್ವಿತೀಯ ವಲಯ ಶೇ.26.13
- ಪೂರಕ ವಲಯ ಶೇ.54.56

**ವಲಯಗಳ ಬೆಳವಣಿಗೆ ದರ.**

- ಪ್ರಾಥಮಿಕ ವಲಯ ಶೇ. 2
- ದ್ವಿತೀಯ ವಲಯ ಶೇ. 9.9
- ಪೂರಕ ವಲಯ ಶೇ. 9.2

**ರಾಜ್ಯ ಹಣಕಾಸು:**

- ತೆರಿಗೆ ಸಂಗ್ರಹಣೆ.

| ತೆರಿಗೆ | 2005-06 | 2006-07 | ಸಂಗ್ರಹಣೆ ಹಿಂದಿನ ಸಾಧನೆ ಆಧಾರದಲ್ಲಿ (ಬಿಂಬಿತ) | 2005-06ಕ್ಕೆ ಹೋಲಿಕೆ ಬೆಳವಣಿಗೆ (ಶೇಕಡಾವಾರು) |
|---|---|---|---|---|
| ವಾಣಿಜ್ಯ ತೆರಿಗೆ | 11483.74 | 14190.75 | 14055.89 | 22.40 |
| ಅಬಕಾರಿ | 3396.79 | 4100.18 | 4519.95 | 33.07 |
| ಮೋಟಾರು ವಾಹನ | 1105.45 | 1375.00 | 1479.66 | 33.85 |
| ನೋಂದಣಿ ಮತ್ತು ಮುದ್ರಾಂಕ | 2212.20 | 2766.11 | 3331.14 | 50.58 |
| ಭೂ ಕಂದಾಯ | 116.50 | 82.15 | 107.61 | -7.63 |
| **ಒಟ್ಟು** | **18314.68** | **22514.19** | **23494.25** | **28.28** |

**ವಿತ್ತೀಯ ಸುಧಾರಣೆಗಳು**

- ವಿತ್ತೀಯ ನೀತಿ ಸಂಸ್ಥೆ ಸ್ಥಾಪನೆ.
- ಮೃದು ಆದರೆ ಕಠಿಣ ತೆರಿಗೆ ವಸೂಲಿ ಆಡಳಿತ.
- ಜುಲೈ 7 ರಿಂದ ಸಾರಾಯಿ ಮಾರಾಟ ನಿಷೇಧ.
- ಕರ್ನಾಟಕ - ಏಪ್ರಿಲ್ 1 ರಿಂದ ಲಾಟರಿ ಮುಕ್ತವಲಯವೆಂದು ಘೋಷಣೆ.
- ಕೇಂದ್ರೀಯ ಮಾರಾಟ ತೆರಿಗೆ ಶೇ.4 ರಿಂದ 3 ಕ್ಕೆ ಇಳಿಕೆ.
- ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ತೆರಿಗೆ ಅಧಿನಿಯಮಕ್ಕೆ ತಿದ್ದುಪಡಿ. ಇ-ಸಂಗ್ರಹಣೆಗೆ ಬೆಂಬಲ.
- ಆಸ್ತಿ ವಿಮಾಪತ್ರ ವ್ಯವಸ್ಥೆಗೆ ಪ್ರೋತ್ಸಾಹ, ನೋಂದಣಿ ನೀತಿಗೆ ತಿದ್ದುಪಡಿ.

**ಕೃಷಿ**

- ಕೃಷಿ ಉತ್ಪಾದನೆ ಉದ್ದೇಶಿತ ಗುರಿಗಿಂತ ಶೇ.25 ರಷ್ಟು ಕಡಿಮೆ.
- ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ನೀಡುವ ಹನಿ ನೀರಾವರಿ, ಬಿತ್ತನೆಬೀಜ, ಎತ್ತು-ಗಾಡಿಗಳ ಸಹಾಯ ಧನ ಯೋಜನೆ ಮುಂದುವರಿಕೆ.
- ಬಿತ್ತನೆಬೀಜ ವಿತರಣೆಗೆ 80 ಕೋಟಿ ರೂ.
- 50,000 ಸಾವಿರ ರೈತರಿಗೆ ಎತ್ತುಗಳ ವಿತರಣೆಗೆ 50 ಕೋಟಿ ರೂ.
- ಟ್ರಾಕ್ಟರ್, ಟ್ರೆಲ್ಲರ್ ಖರೀದಿಗೆ 39 ಕೋಟಿ ರೂ.
- ಕರ್ನಾಟಕ ಜೈವಿಕ ಇಂಧನ ಕಾರ್ಯಕ್ರಮಕ್ಕೆ ಚಾಲನೆ.
- ಕರ್ನಾಟಕ-ಜಾಗತಿಕ ಬೀಜ ತಾಣ ಕಾರ್ಯಕ್ರಮಕ್ಕೆ ಚಾಲನೆ.
- ಕರ್ನಾಟಕ ಕೃಷಿ ವಾಣಿಜ್ಯ ಮೇಳ ಪ್ರಾಧಿಕಾರ.

**ತೋಟಗಾರಿಕೆ**

- ಹನಿ ನೀರಾವರಿ ಯೋಜನೆಗೆ 20 ಕೋಟಿ ರೂ.
- ಬಾಗಲಕೋಟೆಯಲ್ಲಿ ತೋಟಗಾರಿಕಾ ವಿಶ್ವವಿದ್ಯಾಲಯ ಸ್ಥಾಪನೆ.
- ಬೀದರ್‌ನಲ್ಲಿ ತೋಟಗಾರಿಕಾ ಕಾಲೇಜು.
- ಶೃಂಗೇರಿಯಲ್ಲಿ ಅಡಿಕೆ ಸಂಶೋಧನೆ ಸಂಸ್ಥೆ ಸ್ಥಾಪನೆ.
- ದಾಳಿಂಬೆಗೆ ತಗಲುವ ದುಂಡು ರೋಗಾಣು ಸಂಶೋಧನೆಗೆ ಧಾರವಾಡ ಕೃಷಿ ವಿಶ್ವವಿದ್ಯಾಲಯಕ್ಕೆ 50 ಲಕ್ಷ ರೂ.

**ಪಶುಸಂಗೋಪನೆ:**

- ಗುಲ್ಬರ್ಗಾದಲ್ಲಿ ಹೈನುಗಾರಿಕೆ ಕಾಲೇಜು ಸ್ಥಾಪನೆ.
- ಶಿವಮೊಗ್ಗದಲ್ಲಿ ಟಾಕ್ಸಿಲಾಜಿಕಲ್ ಅಧ್ಯಯನ ಕೇಂದ್ರ ಸ್ಥಾಪನೆ.
- ಬೆಳಗಾವಿಯಲ್ಲಿ ವ್ಯಾಕ್ಸಿನ್ ಅಧ್ಯಯನ ಕೇಂದ್ರ ಸ್ಥಾಪನೆ.
- ಮಡಿಕೇರಿಯಲ್ಲಿ ವನ್ಯಜೀವಿ ಪಶುವೈದ್ಯಕೀಯ ಸಂಸ್ಥೆ ಸ್ಥಾಪನೆ.

**ಕಂದಾಯ:**

- ಸಾಮಾಜಿಕ ಭದ್ರತಾ ನಿರ್ದೇಶನಾಲಯದ ಸ್ಥಾಪನೆ.
- ವೃದ್ಧಾಪ್ಯ ವೇತನ, ವಿಧವಾ ವೇತನ, ಅಂಗವಿಕಲರ ವೇತನ, 200 ರೂ. ಗಳಿಂದ 400 ರೂ.ಗಳಿಗೆ ಏರಿಕೆ.
- ಸ್ವಾತಂತ್ರ್ಯ ಹೋರಾಟಗಾರರಿಗೆ ಮಾಸಾಶನ 1500 ರಿಂದ 3000 ಸಾವಿರ ರೂ.ಗಳಿಗೆ ಏರಿಕೆ.
- ಗೋವಾ ವಿಮೋಚನಾ ಚಳುವಳಿ ಹೋರಾಟಗಾರರಿಗೆ 2000 ರೂ.ಗಳ ಮಾಸಾಶನ.

**ಪ್ರಾಂತೀಯ ಅಸಮತೋಲನ:**

- ಪ್ರಾಂತೀಯ ಅಸಮತೋಲನಾ ನಿವಾರಣೆಗೆ ನಂಜುಂಡಪ್ಪ ವರದಿಯ ಅನುಷ್ಠಾನ.
- ಎಂಟು ವರ್ಷಗಳ ಅವಧಿಯ ವಿಶೇಷ ಅಭಿವೃದ್ಧಿ ಯೋಜನೆ ಜಾರಿ.
- 2007-08ನೇ ಸಾಲಿಗೆ 1576 ಕೋಟಿ ರೂಗಳ ವಿಶೇಷ ಅಭಿವೃದ್ಧಿ ನಿಧಿ.
- ವಿಶೇಷ ಅಭಿವೃದ್ಧಿ ಯೋಜನೆ ಉಸ್ತುವಾರಿಗೆ ಉನ್ನತಮಟ್ಟದ ಸಮಿತಿ.
- ಅತಿ ಹೆಚ್ಚು ಹಿಂದುಳಿದ, ಅತಿ ಹಿಂದುಳಿದ, ಹಿಂದುಳಿದ ತಾಲ್ಲೂಕುಗಳಿಗೆ ಕ್ರಮವಾಗಿ ಶೇ.50, ಶೇ. 30 ಮತ್ತು ಶೇ. 20 ರ ಹೆಚ್ಚುವರಿ ಅನುದಾನ.

**ಸಾಲ ಮನ್ನಾ**

- 01.04.06 ರಿಂದ ಈಚೆಗೆ ರೈತರು ಸಹಕಾರ ಸಂಘಗಳಿಂದ ಪಡೆದಿರುವ 25,000 ರೂ.ಗಳ ವರೆಗಿನ ಅಲ್ಪಾವಧಿ ಸಾಲ ಮನ್ನಾ.
- ಸಾಲ ಮರುಪಾವತಿ ಮಾಡಿರುವ ರೈತರಿಗೆ ಬಡ್ಡಿ ಮನ್ನಾ.
- ಅಲ್ಪಾವಧಿ ಸಾಲ ಮರುಪಾವತಿ ಮಾಡಿರುವ ರೈತರಿಗೆ ಸಾಲದ ಅಸಲಿನ ಹಣ. ಮೂರು ವರ್ಷಗಳ ನಂತರ ಶೇ.4 ರ ಬಡ್ಡಿ ಸಮೇತ ಮರುಪಾವತಿ.

**ಸಂಧ್ಯಾ ಸುರಕ್ಷ:**

- ರಾಷ್ಟ್ರದಲ್ಲೇ ವಿನೂತನವಾದ ಸಾಮಾಜಿಕ ಭದ್ರತಾ ಯೋಜನೆ.
- 60 ವರ್ಷ ಮೀರಿದ ಎಲ್ಲಾ ವರ್ಗದ ಬಡಜನರಿಗೆ ಮಾಸಿಕ 400 ರೂ.ಗಳ ವೇತನ.
- ಸಾಮಾಜಿಕ ಭದ್ರತಾ ಯೋಜನೆ ಅನುಷ್ಠಾನಕ್ಕೆ ಪ್ರತ್ಯೇಕ ನಿರ್ದೇಶನಾಲಯ.

**ಭಾಗ್ಯಲಕ್ಷ್ಮಿ**

- 1.5 ಲಕ್ಷಕ್ಕೂ ಹೆಚ್ಚು ಮಂದಿ ಫಲಾನುಭವಿಗಳ ಆಯ್ಕೆ.
- ಸರ್ಕಾರದ ಅಧಿಕಾರಿಗಳನ್ನೊಳಗೊಂಡ ಟ್ರಸ್ಟ್‌ನಲ್ಲಿ ಯೋಜನೆಯ ಹಣ ಸುಭದ್ರ ನೋಂದಣಿ.
- 18 ವರ್ಷದ ನಂತರ ಹೆಣ್ಣುಮಗುವಿಗೆ ಬಡ್ಡಿ ಸಮೇತ ಠೇವಣಿ ಹಣ.
- 2007-08ನೇ ಸಾಲಿಗೆ 225 ಕೋಟಿ ರೂ.ಗಳು ಮೀಸಲು.

**ಆದರ್ಶ ವಿವಾಹ:**

- ಸಾಮೂಹಿಕ ವಿವಾಹಗಳ ಸಂಘಟನೆಗೆ ಪ್ರೋತ್ಸಾಹ.
- ಸಾಮೂಹಿಕ ವಿವಾಹದಲ್ಲಿ ಮದುವೆಯಾದ ವಧುವಿಗೆ 10,000 ರೂ.ಗಳ 2 ವರ್ಷದ ಠೇವಣಿ ರೂಪದ ಪ್ರೋತ್ಸಾಹ ಧನ.

**ಅಮೃತ**

- ಅನಾಥ ವಿಧವೆಯರು, ದೇವದಾಸಿಯರಿಗೆ ಹಸು-ಎಮ್ಮೆ ನೀಡುವ ಯೋಜನೆ.
- 10,000 ರೂ.ಗಳ ಸಹಾಯಧನ ಮತ್ತು 10,000 ರೂ.ಗಳ ಸಾಲ. ಒಟ್ಟು 20,000 ರೂ.ಗಳ ಸಾಲ ಮಂಜೂರಾತಿ.
- ಕರೆಯುವ ಹಸು ಅಥವಾ ಎಮ್ಮೆ ಖರೀದಿಸಲು ನೆರವು.

**ಆರೋಗ್ಯ ನಗರ**

- ರಾಮನಗರದಲ್ಲಿ ಆರೋಗ್ಯ ನಗರ ಸ್ಥಾಪನೆ.
- ವೈದ್ಯಕೀಯ ಕಾಲೇಜು, ದಂತವೈದ್ಯಕೀಯ ಕಾಲೇಜು, ನರ್ಸಿಂಗ್ ಕಾಲೇಜುಗಳ ಸ್ಥಾಪನೆ.
- 250 ಹಾಸಿಗೆ ಸಾಮರ್ಥ್ಯದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಸ್ಥಾಪನೆ.

- ಒಟ್ಟು ಯೋಜನೆಯ ವೆಚ್ಚ 283 ಕೋಟಿ.
- ವೈದ್ಯಕೀಯ ವಿಶ್ವವಿದ್ಯಾಲಯದಿಂದ ಮುಂದಿನ ಮೂರು ವರ್ಷಗಳಲ್ಲಿ 150 ಕೋಟಿ ರೂ. ವೆಚ್ಚ.
- 133 ಕೋಟಿ ರೂ.ಗಳು ಸರ್ಕಾರದಿಂದ ಹೂಡಿಕೆ.

**ಸಂಜೆ ಹೊರರೋಗಿ ಸೇವೆ:**

- ಸರ್ಕಾರಿ ಆಸ್ಪತ್ರೆಗಳಲ್ಲಿ ಸಂಜೆ ರೋಗಿ ಸೇವೆ.
- ಸಂಜೆ 5.30 ರಿಂದ 8.30 ರವರೆಗೆ ವಿಶೇಷ ಕಾರ್ಯನಿರ್ವಹಣೆ.
- ಈ ಸೇವೆಯಲ್ಲಿ ತೊಡಗುವ ವೈದ್ಯರಿಗೆ ಪ್ರತಿ ದಿನಕ್ಕೆ 300 ರೂ.ಗಳ ಗೌರವ ಧನ. ದಾದಿಯರಿಗೆ 100 ರೂ.ಗಳ ಗೌರವ ಧನ.
- ಖಾಸಗಿ ವೈದ್ಯರಿಗೂ ಅವಕಾಶ ಲಭ್ಯತೆ ಮೇರೆಗೆ ಪಾಲ್ಗೊಳ್ಳುವ ಅವಕಾಶ.

**ಸಮಾಜ ಕಲ್ಯಾಣ:**

- 59 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಆರಂಭ.
- 210 ಹೊಸ ಪೂರ್ವ ಮೆಟ್ರಿಕ್ ಮತ್ತು ಮೆಟ್ರಿಕ್ ನಂತರದ ವಸತಿ ನಿಲಯಗಳ ಹಾಸ್ಟೆಲ್‌ಗಳ ಆರಂಭ.
- ಶೇ.50ರಷ್ಟು ಮೆಟ್ರಿಕ್ ನಂತರದ ಹಾಸ್ಟೆಲ್‌ಗಳು ಹೆಣ್ಣು ಮಕ್ಕಳಿಗೆ ಮೀಸಲು.
- ಗಂಗಾಕಲ್ಯಾಣ ಯೋಜನೆಗೆ 144 ಕೋಟಿ ರೂ.
- ಅಂಗವಿಕಲರಿಗೆ ಆಧಾರ ಯೋಜನೆಯಡಿ ಕಿರು ಮಳಿಗೆ ಮತ್ತು ಸಾಲ ಹಂಚಿಕೆ.

**ಕೈಗಾರಿಕೆ ಮತ್ತು ಮೂಲಸೌಕರ್ಯ:**

- ಕೈಗಾರಿಕಾ ಮೂಲಸೌಕರ್ಯಗಳ ಅಭಿವೃದ್ಧಿಗೆ 100 ಕೋಟಿ ರೂ.

- ಸುವರ್ಣ ಕಾಯಕ ಯೋಜನೆಗೆ 70 ಕೋಟಿ ರೂ.
- ಬಾಕಿ ಉಳಿದಿರುವ ಕೈಗಾರಿಕಾ ಸಬ್ಸಿಡಿ ಸಂಪೂರ್ಣ ಪಾವತಿ.
- ಬೆಂಗಳೂರು ಅಂತರರಾಷ್ಟ್ರೀಯ ವಿಮಾಣ ನಿಲ್ದಾಣ ಶರವೇಗದಲ್ಲಿ ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸುವ ಭರವಸೆ.
- ನಮ್ಮ ಮೆಟ್ರೋ ರೈಲು ಯೋಜನೆ ಕಾಮಗಾರಿಗೆ ಚುರುಕು.
- ಜಿಲ್ಲಾ ಕೇಂದ್ರಗಳಲ್ಲಿ ಮಿನಿ ವಿಮಾನ ನಿಲ್ದಾಣ ಮತ್ತು ಹೆಲಿಪ್ಯಾಡ್ ನಿರ್ಮಾಣ.
- ರೈಲ್ವೆ ಯೋಜನೆಗಳ ಶೀಘ್ರ ಅನುಷ್ಠಾನಕ್ಕೆ 150 ಕೋಟಿ ರೂ. ರಾಜ್ಯದ ಕೊಡುಗೆ.

**ಬೆಂಗಳೂರು ಅಭಿವೃದ್ಧಿ:**

- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಅಸ್ತಿತ್ವಕ್ಕೆ.
- ವಿಶೇಷ ಅಭಿವೃದ್ಧಿ ಯೋಜನೆಯಡಿ ಬಿಬಿಎಂಪಿಗೆ 250 ಕೋಟಿ ರೂ.ಗಳ ಅನುದಾನ.
- ಕಾವೇರಿ 4ನೇ ಹಂತದ ಕುಡಿಯುವ ನೀರಿಗೆ 415 ಕೋಟಿ ರೂ.ಗಳ ಅನುದಾನ.
- ರಸ್ತೆಗಳ ಅಭಿವೃದ್ಧಿಗೆ 200 ಕೋಟಿ ರೂ.
- ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಾಣಕ್ಕೆ ರಾಜ್ಯದ ಪಾಲಿನ ಹಣ 75.96 ಕೋಟಿ ರೂ.ಗಳ ನೀಡಿಕೆಗೆ ಕ್ರಮ.
- ಮೆಟ್ರೋ ರೈಲು ಯೋಜನೆಗೆ ರಾಜ್ಯದ ಪಾಲು 172.88 ಕೋಟಿ ರೂ.
- ಜೆಎನ್‌ಎನ್‌ಯುಆರ್‌ಎಂ ಯೋಜನೆಯಡಿ ಬೆಂಗಳೂರಿಗೆ 800 ಕೋಟಿ ರೂ.ಗಳ ನೆರವು.
- ಇಂದಿರಾನಗರದಲ್ಲಿ ಹೊಸ ಸಾರ್ವಜನಿಕ ಆಸ್ಪತ್ರೆಗೆ ಚಾಲನೆ.

- ಬೆಂಗಳೂರು ಅಭಿವೃದ್ಧಿಗಾರರ, ಕಟ್ಟಡ ನಿರ್ಮಾಣಕಾರರ ಮತ್ತು ಮನೆ ಮಾಲೀಕರ ವಿವರಗಳನ್ನೊಳಗೊಂಡ ಮಾಹಿತಿ ಭಂಡಾರ ಸ್ಥಾಪನೆ.

**ಲೋಕೋಪಯೋಗಿ:**

- ಜಿಲ್ಲಾ ಪ್ರಮುಖ ರಸ್ತೆಗಳ ನಿರ್ವಹಣೆ ಮತ್ತು ಅಭಿವೃದ್ಧಿಗೆ 300 ಕೋಟಿ ರೂ. ಮಂಜೂರು.
- ಕೆಆರ್‌ಡಿಸಿಎಲ್ ಸಂಸ್ಥೆಗೆ ಬಂಡವಾಳ ಕಾಮಗಾರಿಗಳಿಗಾಗಿ 300 ಕೋಟಿ ರೂ.
- ಸಾರ್ವಜನಿಕ ಕಟ್ಟಡಗಳ ನಿರ್ಮಾಣಕ್ಕೆ 190 ಕೋಟಿ ರೂ.

**ಕನ್ನಡ ಮತ್ತು ಸಂಸ್ಕೃತಿ:**

- ಡಾ: ರಾಜ್‌ಕುಮಾರ್ ಸ್ಮಾರಕ ನಿರ್ಮಾಣಕ್ಕಾಗಿ 3 ಕೋಟಿ ರೂ.
- ಪುಸ್ತಕ ಪ್ರಕಟಣೆಗಾಗಿ ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ 60 ಲಕ್ಷ ರೂ.
- ಡಾ: ಬೇಂದ್ರೆ ಸ್ಮಾರಕ ಟ್ರಸ್ಟ್; ಡಾ: ಪು.ತಿ.ನ. ಗ್ರಂಥಾಲಯ ಅಧ್ಯಯನ ಕೇಂದ್ರ; ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಟ್ರಸ್ಟ್‌ಗಳಿಗೆ ತಲಾ 10 ಲಕ್ಷ ರೂ.
- ಹಂಪಿ ಉತ್ಸವದ ಆಚರಣೆಗೆ 1 ಕೋಟಿ ರೂ.
- ಬೆಂಗಳೂರು ನಗರದ ಇತಿಹಾಸವನ್ನು ಬಿಂಬಿಸುವ ಮ್ಯೂಸಿಯಂನ ಸ್ಥಾಪನೆಗಾಗಿ ಕೆಂಪೇಗೌಡ ಪ್ರತಿಷ್ಠಾನಕ್ಕೆ 1 ಕೋಟಿ ರೂ.
- ಜಗಜ್ಯೋತಿ ಬಸವೇಶ್ವರ ಜನ್ಮಸ್ಥಳ ಇಂಗಳೇಶ್ವರದ ಅಭಿವೃದ್ಧಿಗೆ 2 ಕೋಟಿ ರೂ.
- ಶಿವಮೊಗ್ಗ ಜಿಲ್ಲೆಯ ತೊಗರ್ಸಿ ಗ್ರಾಮದ ಇತಿಹಾಸ ಪ್ರಸಿದ್ಧ ಮಲ್ಲಿಕಾರ್ಜುನ ದೇವಸ್ಥಾನದ ಅಭಿವೃದ್ಧಿಗಾಗಿ 2 ಕೋಟಿ ರೂ.
- ಹುಬ್ಬಳ್ಳಿಯ ಸಿದ್ಧಾರೂಢ ಮಠಕ್ಕೆ 1 ಕೋಟಿ ರೂ.

- ಕರ್ನಾಟಕ ಜಾನಪದ ಪರಿಷತ್‌ಗೆ 50 ಲಕ್ಷ ರೂ.
- ಕಾಸರಗೋಡಿನ ಕನ್ನಡ ಸಂಘಕ್ಕೆ 5 ಲಕ್ಷ ರೂ.
- ‘ಗಂಗಾಂಬಿಕಾ’ ಐಕ್ಯ ಮಂಟಪದ ಅಭಿವೃದ್ಧಿಗೆ 5 ಕೋಟಿ ರೂ.
- ಧಾರವಾಡದಲ್ಲಿರುವ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಬಸವಪೀಠ ಕಟ್ಟಡ ನಿರ್ಮಾಣ ಮತ್ತು ಬಸವ ಸಾಹಿತ್ಯದ ಭಾಷಾಂತರಕ್ಕಾಗಿ 2 ಕೋಟಿ ರೂ.
- ಹಾವೇರಿಯಲ್ಲಿ ಸರ್ವಜ್ಞ ಸ್ಮಾರಕಕ್ಕೆ 50 ಲಕ್ಷ ರೂ.
- ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ ಹಡಪದ ಅಪ್ಪಣ್ಣ ಪೀಠ ಸ್ಥಾಪನೆಗೆ 50 ಲಕ್ಷ ರೂ.
- ಗುಲ್ಬರ್ಗಾದ ವಿಶ್ವವಿದ್ಯಾಲಯದಲ್ಲಿ ಅಂಬಿಗರ ಚೌಡಯ್ಯ ಪೀಠ ಸ್ಥಾಪನೆಗೆ 1 ಕೋಟಿ ರೂ.
- ತುಮಕೂರಿನ ಸಿದ್ಧಗಂಗಾ ಕ್ಷೇತ್ರದಲ್ಲಿ ವಿದ್ಯಾರ್ಥಿ ನಿಲಯದ ನೈರ್ಮಲ್ಯ ಮತ್ತು ಮೂಲಸೌಕರ್ಯಗಳನ್ನು ನಿರ್ಮಿಸಲು 10 ಕೋಟಿ ರೂ.
- ಬೆಳಗಾವಿಯ ಅಥಣಿಯಲ್ಲಿನ ದೇವದಾಸಿಯರ ಮಕ್ಕಳ ವಿಮೋಚನಾ ವಸತಿ ಶಾಲೆಗೆ 1.50 ಕೋಟಿ ರೂ.
- ಯಕ್ಷಗಾನ ಅಕಾಡೆಮಿಗೆ 20 ಲಕ್ಷ ರೂ.
- ಜಿಗಣಿಯಲ್ಲಿರುವ ಶ್ರೀ ಸ್ವಾಮಿ ವಿವೇಕಾನಂದ ಯೋಗ ಅನುಸಂಧಾನ ಸಂಸ್ಥೆಗೆ 2 ಕೋಟಿ ರೂ.
- ಕುವೆಂಪು ವಿದ್ಯಾವರ್ಧಕ ಟ್ರಸ್ಟ್‌ಗೆ 6 ಲಕ್ಷ ರೂ.
- ಬಿ.ಎಂ.ಶ್ರೀ ಪ್ರತಿಷ್ಠಾನಕ್ಕೆ 5 ಲಕ್ಷ ರೂ.
- ಹೊಸರಿತ್ತಿ ಗ್ರಾಮದಲ್ಲಿ ಹಳ್ಳಿಕೇರಿ ಗುದ್ಲಪ್ಪ ಸ್ಮಾರಕ ಭವನ ನಿರ್ಮಾಣಕ್ಕೆ 1.25 ಕೋಟಿ ರೂ.

- ಕನಕದಾಸರ ಜನ್ಮಸ್ಥಳ ಹಾವೇರಿಯ 'ಬಾಡಾ' ಗ್ರಾಮದ ಅಭಿವೃದ್ಧಿಗಾಗಿ 1.25 ಕೋಟಿ ರೂ.
- ಹೊಳೆ ಆಲೂರಿನ ಅಭಿವೃದ್ಧಿ ಮತ್ತು ಆಲೂರು ವೆಂಕಟರಾಯರ ಸ್ಮಾರಕ ನಿರ್ಮಾಣಕ್ಕಾಗಿ 1.25 ಕೋಟಿ ರೂ.
- ಉಡುಪಿಯಲ್ಲಿ ನಡೆಯಲಿರುವ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ 1 ಕೋಟಿ ರೂ.
- ಕನ್ನಡ ವಿಶ್ವಕೋಶದ ಮರುಮುದ್ರಣಕ್ಕೆ 50 ಲಕ್ಷ ರೂ.
- ಎಫಿಗ್ರಾಫಿಯಾ ಕರ್ನಾಟಕ ಸಂಪುಟಗಳ ಮರು ಮುದ್ರಣಕ್ಕೆ 50 ಲಕ್ಷ ರೂ.
- ಕಾದಂಬರಿಕಾರ ಅನಕೃ ಅವರ ನಿವಾಸವನ್ನು ಸ್ಮಾರಕವಾಗಿ ಪರಿವರ್ತಿಸಲು 1 ಕೋಟಿ ರೂ.
- ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ 1.50 ಕೋಟಿ ರೂ.
- ಪಂಜೆ ಮಂಗೇಶರಾಯರ ಸ್ಮಾರಕ ನಿರ್ಮಾಣಕ್ಕಾಗಿ 50 ಲಕ್ಷ ರೂ.
- ಮಂಡ್ಯ ಜಿಲ್ಲೆಯ ಬೂಕನಕೆರೆ ಗ್ರಾಮದಲ್ಲಿ ಸಮುದಾಯ ಭವನ ಮತ್ತು ಗ್ರಾಮದ ಅಭಿವೃದ್ಧಿ ಕಾಮಗಾರಿಗಾಗಿ 1 ಕೋಟಿ ರೂ.
- ರಾಜ್ಯ ಸರ್ಕಾರ ಪ್ರಕಟಿಸಿರುವ ಡಾ: ಬಿ.ಆರ್. ಅಂಬೇಡ್ಕರ್‌ರವರ ಪುಸ್ತಕಗಳ ಮರು ಮುದ್ರಣಕ್ಕೆ 1 ಕೋಟಿ ರೂ.
- ದ.ರಾ.ಬೇಂದ್ರೆ ಸಾಹಿತ್ಯ ಮರು ಮುದ್ರಣಕ್ಕಾಗಿ 1 ಕೋಟಿ ರೂ.
- ಡಾ: ಜಿ.ಎಸ್. ಶಿವರುದ್ರಪ್ಪನವರ ಸಾಹಿತ್ಯ ಮುದ್ರಣಕ್ಕಾಗಿ 50 ಲಕ್ಷ ರೂ.
- ಎ.ಆರ್. ಕೃಷ್ಣಶಾಸ್ತ್ರಿಗಳ ಜನ್ಮಸ್ಥಳವಾದ ಅಂಬಳೆ ಗ್ರಾಮದ ಅಭಿವೃದ್ಧಿಗಾಗಿ 1 ಕೋಟಿ ರೂ.
- ಕುವೆಂಪುರವರ ಗುರುಗಳಾದ ಟಿ.ಎಸ್. ವೆಂಕಣ್ಣಯ್ಯನವರ ಜನ್ಮಸ್ಥಳ ಚಿತ್ರದುರ್ಗದ ಥಳುಕು ಗ್ರಾಮದ ಅಭಿವೃದ್ಧಿಗಾಗಿ 1.5 ಲಕ್ಷ ರೂ.
- ಡಾ: ಸಿದ್ದಯ್ಯ ಪುರಾಣಿಕರ ಸ್ಮಾರಕ ನಿರ್ಮಾಣಕ್ಕಾಗಿ 1 ಕೋಟಿ ರೂ.

- ಧಾರವಾಡ ಜಿಲ್ಲೆಯ ಜೈನ ಯಾತ್ರಾಸ್ಥಳ ವರೂರಿನ ಅಭಿವೃದ್ಧಿಗೆ 3 ಕೋಟಿ ರೂ.
- ಮಲೆಮಹಾದೇಶ್ವರ ಬೆಟ್ಟದಲ್ಲಿ ಜಾನಪದ ಅಧ್ಯಯನ ಕೇಂದ್ರ ಸ್ಥಾಪನೆ.

**ಪ್ರವಾಸೋದ್ಯಮ:**

- ಪ್ರವಾಸೋದ್ಯಮ ಉತ್ತೇಜನಕ್ಕೆ ನಾಲ್ಕು ಮುಖ್ಯ ಪ್ರವಾಸಿ ಮಾರ್ಗಗಳ ಗುರುತು. ಖಾಸಗಿ ಸಾರ್ವಜನಿಕ ಸಹಭಾಗಿತ್ವದಲ್ಲಿ ಪ್ರವಾಸಿಗರಿಗೆ ಮೂಲಸೌಕರ್ಯ.
- ಬೇಲೂರು-ಹಳೆಬೀಡು-ಶ್ರವಣಬೆಳಗೊಳ-ಮಡಿಕೇರಿ-ಮೈಸೂರು - ಶ್ರೀರಂಗಪಟ್ಟಣ-ಸೋಮನಾಥಪುರ-ಶಿಂಷಾ.
- ಶಿವಮೊಗ್ಗ-ತೀರ್ಥಹಳ್ಳಿ-ಆಗುಂಬೆ-ಜೋಗ್-ಮಂಗಳೂರು.
- ಹಂಪಿ-ಬಾದಾಮಿ-ಐಹೊಳೆ-ಪಟ್ಟದಕಲ್ಲು-ಕೂಡಲಸಂಗಮ-ಬಿಜಾಪುರ.
- ಮಂಗಳೂರು-ಉಡುಪಿ-ಧರ್ಮಸ್ಥಳ-ಕೊಲ್ಲೂರು-ಮರವಂತೆ-ಮುರುಡೇಶ್ವರ- ಗೋಕರ್ಣ.
- ಪ್ರವಾಸೋದ್ಯಮಕ್ಕೆ ಒಟ್ಟಾರೆ 148 ಕೋಟಿ ರೂ.ಗಳು.

**ವಾರ್ತೆ:**

- ಸಮುದಾಯ ರೇಡಿಯೋ ಕೇಂದ್ರಗಳ ಸ್ಥಾಪನೆಗೆ ಉತ್ತೇಜನ ನೀಡಲು 'ನಮ್ಮ ಬಾನುಲಿ' ಯೋಜನೆ ಜಾರಿಗೆ.
- ಕನ್ನಡ ಪತ್ರಿಕೆ ಮತ್ತು ಜಿಲ್ಲಾ ಮಟ್ಟದ ಪತ್ರಿಕೆಗಳಿಗೆ ಪ್ರೋತ್ಸಾಹ ನೀಡಲು ನೂತನ ಜಾಹೀರಾತು ನೀತಿ.
- ಚಿತ್ರೋದ್ಯಮಕ್ಕೆ ಹೊಸದಾಗಿ ಪ್ರವೇಶಿಸುವವರಿಗೆ ಕನ್ನಡದ ಕತೆ, ಕಾದಂಬರಿ ಆಧಾರಿತ ಚಿತ್ರಗಳಿಗೆ ಹೊಸ ಅಲೆಯ ಚಿತ್ರಗಳಿಗೆ ಡಿಜಿಟಲ್ ತಂತ್ರಜ್ಞಾನ ಚಿತ್ರಗಳಿಗೆ ಪ್ರೋತ್ಸಾಹ ನೀಡಲು ನೂತನ ಚಲನಚಿತ್ರ ನೀತಿ.
- ಕಿರುತೆರೆಗೆ ಪ್ರೋತ್ಸಾಹ ನೀಡಲು ವಾರ್ಷಿಕ ಪ್ರಶಸ್ತಿ ವಿತರಣೆ.

- ಹಿರಿಯ ಪತ್ರಕರ್ತರ ಭದ್ರತೆಗೆ ಕ್ಷೇಮ ನಿಧಿ ಸ್ಥಾಪನೆ.

**ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ:**

- ಸರ್ಕಾರಿ ನೌಕರರಿಗೆ 5ನೇ ವೇತನ ಆಯೋಗದ ಶಿಫಾರಸ್ಸುಗಳ ಅನುಷ್ಠಾನ.
- 01.04.2007 ರಿಂದ ಪರಿಷ್ಕರಿಸಿದ ವೇತನ ಜಾರಿಗೆ.
- 01.07.2005 ರಿಂದ ಸಾಂಕೇತಿಕ ವೇತನ ನಿಗದಿ.
- 01.04.2006 ರಿಂದ 31.03.2007ರ ವರೆಗಿನ ಪರಿಷ್ಕೃತ ವೇತನ ಬಾಕಿ 2008-09 ನೇ ಸಾಲಿನಲ್ಲಿ ಪಾವತಿ.

**ಅಬಕಾರಿ**

- ರಾಜ್ಯಾದ್ಯಂತ 01.07.2007ರಿಂದ ಸಾರಾಯಿ ಮಾರಾಟ ನಿಷೇಧ.
- ಅಕ್ರಮ ಸಾರಾಯಿ ಮಾರಾಟ ಹತ್ತಿಕ್ಕಲು ಕಟ್ಟುನಿಟ್ಟಿನ ಕ್ರಮ.
- ಹೆಚ್ಚುವರಿ ಸಿಬ್ಬಂದಿ, ವಾಹನ ಮತ್ತು ಪೊಲೀಸರ ನಿಯೋಜನೆ.

**ಲಾಟರಿ**

- ದಿನಾಂಕ: 01.04.2007 ರಿಂದ ಕರ್ನಾಟಕ ರಾಜ್ಯ ಲಾಟರಿ ಮುಕ್ತ ವಲಯವೆಂದು ಘೋಷಣೆ.
- ರಾಜ್ಯ ಹಾಗೂ ಇತರರು ನಡೆಸುತ್ತಿರುವ ಎಲ್ಲಾ ರೀತಿಯ ಲಾಟರಿಗಳ ನಿಷೇಧ.

**ವಾಣಿಜ್ಯ ತೆರಿಗೆಗಳು:**

- ಅಕ್ಕಿ, ಭತ್ತ ಮತ್ತು ಗೋಧಿ ಹಾಗೂ ಅಕ್ಕಿ ಮತ್ತು ಗೋಧಿ ಪದಾರ್ಥಗಳು ಹಾಗೂ ದ್ವಿದಳ ಧಾನ್ಯಗಳ ಮೇಲಿನ ತೆರಿಗೆ ವಿನಾಯಿತಿ ಮತ್ತೊಂದು ವರ್ಷಕ್ಕೆ ಮುಂದುವರಿಕೆ
- ಟ್ರಾಕ್ಟರ್‌ಗಳ ರಬ್ಬರ್ ಟೈರುಗಳು ಮತ್ತು ಟ್ಯೂಬುಗಳು, ಸಾಫ್ಟ್‌ವೇರ್ ಲೈಸೆನ್ಸ್ ಮತ್ತು ಉಪಯೋಗಿಸಿದ ಮೋಟಾರು ವಾಹನಗಳ ಮೇಲಿನ ತೆರಿಗೆ ಶೇ.4ಕ್ಕೆ ಇಳಿತ

- ಶೇ.4ರ ತೆರಿಗೆಗೆ ಒಳಗಾಗುವ ಕೈಗಾರಿಕಾ ಕಚ್ಚಾ ವಸ್ತುಗಳು ಮತ್ತು ಬಂಡವಾಳ ಸರಕುಗಳ ಪಟ್ಟಿಗೆ ಮತ್ತಷ್ಟು ಸರಕುಗಳನ್ನು ಸೇರಿಕೆ
- ವಿಶೇಷ ಆರ್ಥಿಕ ವಲಯ ನಿರ್ಮಾಣಗಾರರು ಮತ್ತು ಅಲ್ಲಿರುವ ಘಟಕಗಳ ಖರೀದಿಯ ಮೇಲೆ ತೆರಿಗೆ ವಿನಾಯಿತಿ ನೀಡಿಕೆ
- ಗುತ್ತಿಗೆದಾರರಿಗೆ ರಾಜಿ ತೆರಿಗೆ ಸಂಗ್ರಹಿಸಲು ಅನುಮತಿ ನೀಡಿಕೆ
- ತೆರಿಗೆ ಇನ್ವಾಯಿಸ್ ನೀಡಲು ಕನಿಷ್ಠ ಮೊತ್ತದ ನಿಗದಿ
- ರಿಟರ್ನ್ ಸಲ್ಲಿಕೆಯಲ್ಲಿ ಆದ ವಿಳಂಬದ ದಂಡದಲ್ಲಿ ಕಡಿತ
- ಟ್ಯಾಕ್ಸ್ ಇನ್ವಾಯಿಸ್ ಮೇಲೆ ಡಿಜಿಟಲ್ ಸಹಿ ಮಾಡಲು ಅವಕಾಶ
- ಲೆಕ್ಕ ಪರಿಶೋಧನೆಯ ವಹಿವಾಟಿನ ಮಿತಿಯ ಏರಿಕೆ
- ಲೆಕ್ಕ ಪುಸ್ತಕಗಳನ್ನು ಸರಿಯಾಗಿ ನಿರ್ವಹಿಸದ ಬಗ್ಗೆಯ ದಂಡದ ಇಳಿತ
- ಮುಖ್ಯ ಕಾಮಗಾರಿ ಗುತ್ತಿಗೆದಾರರ ವಹಿವಾಟಿನಲ್ಲಿ ಉಪ ಗುತ್ತಿಗೆದಾರರಿಗೆ ಪಾವತಿಸಬೇಕಾದ ಮೊತ್ತಗಳಿಗೆ ಕಡಿತ ನೀಡಿಕೆ
- ಪೆಟ್ರೋಲಿಯಂ ಪದಾರ್ಥಗಳು ಹಾಗೂ ಅಂತರ ರಾಜ್ಯ ಸರಕು ವರ್ಗಾವಣೆ ಸಂಬಂಧದ ಹೂಡುವಳಿ ತೆರಿಗೆ ಕಡಿತದ ದರದಲ್ಲಿ ಮಾರ್ಪಾಟು
- ಕಾಸ್ಟ್ ಅಕೌಂಟೆಂಟ್‌ಗಳು ವ್ಯಾಪಾರಿಗಳ ಲೆಕ್ಕ ಪರಿಶೋಧನೆ ಮಾಡಲು ಅವಕಾಶ
- ಒಂದಕ್ಕಿಂತ ಹೆಚ್ಚಿನ ವ್ಯಾಪಾರಗಳಲ್ಲಿ ತೊಡಗಿರುವ ಒಬ್ಬನೇ ವ್ಯಾಪಾರಿಗೆ ರಾಜಿ ತೆರಿಗೆ ಪಾವತಿ ಸೌಲಭ್ಯ ಆಯ್ಕೆ ಮಾಡಲು ಅವಕಾಶ ನೀಡಿಕೆ

**ಸುಧಾರಣಾ ಕ್ರಮಗಳು:**

- ಕಾಕಂಬಿ (ಮೊಲಾಸೆಸ್), ಇಥೈಲ್ ಆಲ್ಕೊಹಾಲ್, ಡೀನೇಚರ್ಡ್ ಸ್ಪಿರಿಟ್ ಮತ್ತು ರೆಕ್ಟಿಫೈಡ್ ಸ್ಪಿರಿಟ್‌ಗಳ ಮೇಲೆ ಶೇ.20ರ ತೆರಿಗೆ
- ಸ್ಪಷ್ಟೀಕರಣ ಮತ್ತು ಪೂರ್ವ ನಿರ್ಣಯ ಪ್ರಾಧಿಕಾರದ ರದ್ದು
- ಸಿಮೆಂಟ್ ಇಟ್ಟಿಗೆಗಳ ಮೇಲೆ ಹೂಡುವಳಿ ತೆರಿಗೆ ಹಿಂತೆಗೆತ

- ಔಷಧಿ ಮಾರಾಟಗಳ ಮೇಲೆ ತೆರಿಗೆಯನ್ನು ಕೂಡಿದ ಗರಿಷ್ಠ ಚಿಲ್ಲರೆ ಬೆಲೆಯ ಮೇಲೆ ತೆರಿಗೆ ಪಾವತಿಸುವ ಆಯ್ಕೆ ಸೌಲಭ್ಯ ನೀಡಿಕೆ

**ಮಾರಾಟ ತೆರಿಗೆ:**

- ಪರಿಹಾರ:
- ಸ್ವಯಂ ವಿದ್ಯುಚ್ಛಕ್ತಿ ಉತ್ಪಾದನೆಗೆ ಖರೀದಿಸುವ ಡೀಸೆಲ್ ಮೇಲೆ ನೀಡಿರುವ ಶೇ.4ರ ತೆರಿಗೆ ರಿಯಾಯಿತಿ ಬಗ್ಗೆ ಸ್ವಯಂ ಪ್ರಮಾಣ ಪತ್ರ ನೀಡಲು ಅವಕಾಶ

**ಪ್ರವೇಶ ತೆರಿಗೆ:**

- ಪರಿಹಾರಗಳು:
- ಅಂತರ ರಾಜ್ಯ ಮಾರಾಟ ಹಾಗೂ ಸರಕು ವರ್ಗಾವಣೆಯಂತೆ ರಾಜ್ಯದ ಹೊರಗೆ ಕಳುಹಿಸಿದ ಸರಕುಗಳ ವಾಪಸಾತಿಗೆ ಮೇಲೆ ತೆರಿಗೆ ವಿನಾಯಿತಿ
- ಕಚ್ಚಾ ತೈಲದ ಮೇಲಿನ ಪ್ರವೇಶ ತೆರಿಗೆ ಶೇ.1ಕ್ಕೆ ಇಳಿತ

**ವೃತ್ತಿ ತೆರಿಗೆ:**

- ಸುಧಾರಣಾ ಕ್ರಮಗಳು:
- ಕೆಲವು ವೃತ್ತಿ ವರ್ಗದವರ ಬಗ್ಗೆ ಮೂಲದಲ್ಲಿಯೇ ತೆರಿಗೆ ಕಡಿತ ಮಾಡಲು ಕಾನೂನು
- ಸ್ವಯಂ ವೃತ್ತಿ ನಿರತ ವ್ಯಕ್ತಿಗಳು ವಾರ್ಷಿಕ ವಿವರ ಪಟ್ಟಿ (ರಿಟರ್ನ್) ಸಲ್ಲಿಸಲು ನಿಯಮ
- ಒಂದಕ್ಕಿಂತ ಹೆಚ್ಚು ವ್ಯಾಪಾರ ಸ್ಥಳ ಹೊಂದಿರುವ ಉದ್ಯೋಗದಾತರು ನೊಂದಣಿಗೆ ಒಂದೇ ಅರ್ಜಿ ಸಲ್ಲಿಸಲು ಅವಕಾಶ
- ಅಧಿಕ ಸಂಪನ್ಮೂಲ ಕ್ರೋಢೀಕರಣ ಕ್ರಮಗಳು:

- ಮುಂದಿನ ವೃತ್ತಿ ವರ್ಗದವರ ಮೇಲೆ ತೆರಿಗೆ
- ವಾಹನ ನಿಲ್ದಾಣ ಸೇವೆ ಒದಗಿಸುವ ಗುತ್ತಿಗೆದಾರರು,
- ಆಯುರ್ವೇದ ಮುಂತಾದ ಮಸಾಜ್ ಪಾರ್ಲರ್‌ಗಳು,
- ಉಪಯೋಗಿಸಿದ ಮೋಟಾರು ವಾಹನಗಳ ಮಾರಾಟ ಏಜೆಂಟ್‌ಗಳು ಮತ್ತು ಸಲಹೆಗಾರರು / ಬ್ರೋಕರ್‌ಗಳು,
- ಕಂಪನಿಗಳ ಪ್ರತಿನಿಧಿಗಳಾಗಿ ಕಾರ್ಯ ನಿರ್ವಹಿಸುವ ವ್ಯಕ್ತಿಗಳು,
- ವರಮಾನ ತೆರಿಗೆದಾತರಾದ ಆದರೆ ವೃತ್ತಿ ತೆರಿಗೆ ಕಾಯ್ದೆ ಅನುಸೂಚಿಯಲ್ಲಿಲ್ಲದ ಯಾವುದೇ ಸ್ವಯಂ ವೃತ್ತಿ ನಿರತ ವ್ಯಕ್ತಿಗಳು.
- ಶಿಕ್ಷಣ ಸಂಸ್ಥೆಗಳು ಮತ್ತು ಟ್ಯುಟೋರಿಯಲ್‌ಗಳನ್ನು ನಡೆಸುವ ವ್ಯಕ್ತಿಗಳಿಗಿರುವ ತೆರಿಗೆ ವಿನಾಯಿತಿಯನ್ನು ಹಿಂತೆಗೆತ
- ಮನರಂಜನಾ ತೆರಿಗೆ:
- ಪರಿಹಾರಗಳು:
- ಮಲ್ಟಿ ಸಿಸ್ಟಂ ಆಪರೇಟರುಗಳ ತೆರಿಗೆ ಶೇ.10 ರಿಂದ ಶೇ.6ಕ್ಕೆ ಇಳಿತ
- ಅಮ್ಯೂಸ್‌ಮೆಂಟ್ ಪಾರ್ಕ್‌ಗಳ ತೆರಿಗೆ ಶೇ.20ರಿಂದ ಶೇ.10ಕ್ಕೆ ಇಳಿತ
- ನಾಟಕಗಳ ಮೇಲಿನ ಮನರಂಜನಾ ತೆರಿಗೆ ವಿನಾಯಿತಿ
- ವಿಲಾಸ ತೆರಿಗೆ:

ಪರಿಹಾರ:

- ಹೋಟೆಲುಗಳ ವಾಸ್ತವಿಕ ಬಾಡಿಗೆ ಮೇಲೆ ಮಾತ್ರ ತೆರಿಗೆ
- ರಾಜ್ಯದಲ್ಲಿ ಎಲ್ಲಾ ತರಹದ ಲಾಟರಿಗಳ ನಿಷೇಧ – ಕರ್ನಾಟಕ ರಾಜ್ಯ ‘ಲಾಟರಿ ಮುಕ್ತ ವಲಯ’ ಎಂದು ಘೋಷಣೆ.

* * * * *